**Akashvani : Bangalore**
**National Bulletin In Kannada**
**22.01.2025 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.01.2025 / 7.35 am**

**<><*<><>*><>**

## ಮುಖ್ಯಾಂಶಗಳು

೧. ಇಂದು 'ಬೇಟಿ ಬಚಾವ್ ಬೇಟಿ ಪಢಾವ್' ಉಪಕ್ರಮದ ಹತ್ತನೇ ವಾರ್ಷಿಕೋತ್ಸವ

೨. ದೆಹಲಿ ವಿಧಾನಸಭಾ ಚುನಾವಣೆ; ಬಿಜೆಪಿ ಬೂತ್ ಮಟ್ಟದ ಕಾರ್ಯಕರ್ತರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಇಂದು ಸಂವಾದ

೩. ಶಾಸನ ಸಭೆಗಳಲ್ಲಿ ಗದ್ದಲ ಮುಕ್ತ ಗುಣಮಟ್ಟದ ಚರ್ಚೆ ಖಾತರಿಪಡಿಸಲು ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನ ನಿರ್ಣಯ

೪. ಟಿ-೨೦ ಕ್ರಿಕೆಟ್; ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿಂದು ಭಾರತ - ಇಂಗ್ಲೆಂಡ್ ಮುಖಾಮುಖಿ.

**<><*<><>*><>**

ಹೆಣ್ಣುಮಕ್ಕಳ ಸುರಕ್ಷತೆ, ಶಿಕ್ಷಣ ಮತ್ತು ಸಬಲೀಕರಣದ ಗುರಿಯೊಂದಿಗೆ ಜಾರಿ ಮಾಡಲಾದ 'ಬೇಟಿ ಬಚಾವ್ ಬೇಟಿ ಪಢಾವ್' ಉಪಕ್ರಮದ ಹತ್ತನೇ ವಾರ್ಷಿಕೋತ್ಸವನ್ನು ಇಂದು ಆಚರಿಸಲಾಗುತ್ತಿದೆ. ನವದೆಹಲಿಯಲ್ಲಿ ಇಂದು ನಡೆಯುವ ಪ್ರಧಾನ ಕಾರ್ಯಕ್ರಮದಲ್ಲಿ ಭದ್ರತಾ ಪಡೆ, ಅರೆ ಸೇನಾಪಡೆ, ದೆಹಲಿ ಪೊಲೀಸ್ ಪಡೆಯ ಮಹಿಳಾ ಅಧಿಕಾರಿಗಳು, ವಿದ್ಯಾರ್ಥಿನಿಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಲಿದ್ದಾರೆ. ಇಂದು ಚಾಲನೆ ದೊರೆಯಲಿರುವ ಹತ್ತನೇ ವಾರ್ಷಿಕೋತ್ಸವದ ಸಂಭ್ರಮಾಚರಣೆ ಅಂತಾರಾಷ್ಟ್ರೀಯ ಮಹಿಳಾ ದಿನವಾದ ಮಾರ್ಚ್ ೮ ರವರೆಗೆ ನಡೆಯಲಿದೆ. ವಿವಿಧ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಈ ಸಂಬಂಧ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ತಿಳಿಸಿದೆ. ದೇಶದಲ್ಲಿ ಕುಸಿಯುತ್ತಿರುವ ಮಕ್ಕಳ ಲಿಂಗಾನುಪಾತ ಮತ್ತು ಲಿಂಗ ಅಸಮಾನತೆಯ ಸಮಸ್ಯೆಗೆ ಉತ್ತರವಾಗಿ ೨೦೧೫ರ ಜನವರಿ ೨೨ ರಂದು ಹರಿಯಾಣದ ಪಾಣಿಪತ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಈ ಯೋಜನೆಗೆ ಚಾಲನೆ ನೀಡಿದ್ದರು.

**<><*<><>*><>**

ದೆಹಲಿ ವಿಧಾನಸಭಾ ಚುನಾವಣೆ ಸಂಬಂಧ ಪ್ರಧಾನಮಂತ್ರಿ ನರೇಂದ್ರ ಮೋದಿ, ಪಕ್ಷದ ಪ್ರಚಾರದ ಭಾಗವಾಗಿ ದೆಹಲಿಯಲ್ಲಿಂದು ಭಾರತೀಯ ಜನತಾಪಕ್ಷದ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ನಮೋ ಅಪ್ಲಿಕೇಷನ್ ಮೂಲಕ ಮಾತನಾಡಲಿದ್ದಾರೆ. 'ಮೇರಾ ಬೂತ್ ಸಬ್ಸೆ

ಮಜಬೂತ್’ ಎಂಬ ಘೋಷಣೆಯೊಂದಿಗೆ ಕಾರ್ಯಕ್ರಮ ಆರಂಭವಾಗಲಿದೆ. ಮೇರಾ ಬೂತ್ ಸಬ್ಸೆ ಮಜಬೂತ್ ಕಾರ್ಯಕ್ರಮದಲ್ಲಿ ದೆಹಲಿಯ ಎಲ್ಲಾ ೨೫೬ ವಾರ್ಡ್‌ಗಳ ೧೩ ಸಾವಿರದ ೩೩ ಬೂತ್‌ಗಳ ಬಿಜೆಪಿ ಕಾರ್ಯಕರ್ತರು ವಿಡಿಯೋ ಕರೆಯ ಮೂಲಕ ಪಾಲ್ಗೊಳ್ಳಲಿದ್ದಾರೆ.

**<><*<><>*><>**

ಶಾಸನ ಸಭೆಗಳಲ್ಲಿ ಕಲಾಪದ ವೇಳೆ ಗದ್ದಲ ಮುಕ್ತ ಪರಿಸರ ಖಾತರಿಪಡಿಸಲು ಹಾಗೂ ಗುಣಮಟ್ಟದ ಚರ್ಚೆ, ಸಂವಾದ ನಡೆಸಲು ಶಾಸನ ಸಭೆಗಳ ಅಖಿಲ ಭಾರತ ಪೀಠಾಸೀನ ಅಧಿಕರಿಗಳ ಸಮ್ಮೇಳನ ನಿರ್ಣಯವನ್ನು ಅಂಗೀಕರಿಸಿದೆ. ಸಂಸತ್ತು ಹಾಗೂ ಶಾಸನ ಸಭೆಗಳ ಅತ್ಯುನ್ನತ ಸಂಸ್ಥೆ, ಪಾಟ್ನಾದಲ್ಲಿ ನಡೆದ ೮೫ನೇ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಈ ಸಂಬಂಧ ಐದು ನಿರ್ಣಯಗಳನ್ನು ಅಂಗೀಕರಿಸಿದೆ. ೮೫ನೇ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮಾರೋಪ ಸಮ್ಮೇಳನ ಉದ್ದೇಶಿಸಿ ಮಾತನಾಡಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಕಲಾಪಗಳು ನಡೆಯದಂತೆ ಯೋಜಿತ ರೀತಿಯಲ್ಲಿ ಅಡ್ಡಿಪಡಿಸುವುದು ಹಾಗೂ ಗದ್ದಲ ಸೃಷ್ಟಿಸುತ್ತಿರುವ ಬಗ್ಗೆ ಪೀಠಾಸೀನಾಧಿಕಾರಿಗಳು ಗಂಭೀರ ಕಳವಳ ವ್ಯಕ್ತಪಡಿಸಿದ್ದಾರೆ ಎಂದರು. ರಾಜಕೀಯ ಪಕ್ಷಗಳು ಶಾಸನ ಸಭೆಗಳಲ್ಲಿ ಸುಗಮ ಕಲಾಪ ನಡೆಸಲು ಸಾಧ್ಯವಾಗುವಂತೆ ತಮ್ಮದೇ ಆದ ನೀತಿ ಸಂಹಿತೆಯನ್ನು ರೂಪಿಸಿಕೊಳ್ಳುವ ಬಗ್ಗೆ ಒಮ್ಮತಕ್ಕೆ ಬರಬೇಕು ಎಂದು ಹೇಳಿದರು. ಎಲ್ಲ ಶಾಸನಸಭಾ ಸಂಸ್ಥೆಗಳನ್ನು ಒಂದೇ ಡಿಜಿಟಲ್ ವೇದಿಕೆಗೆ ತರುವ ಒಂದು ದೇಶ, ಒಂದು ಶಾಸಕಾಂಗ ವೇದಿಕೆ ಅಭಿಯಾನ ಈ ವರ್ಷ ಪೂರ್ಣಗೊಳ್ಳಲಿದೆ ಎಂದು ಹೇಳಿದರು. ಕೃತಕಬುದ್ಧಿಮತ್ತೆ ಬಳಸಲು ಲೋಕಸಭೆ ಶಾಸನ ಸಭೆಗಳಿಗೆ ನೆರವು ನೀಡಲಿದೆ ಎಂದು ಭರವಸೆ ನೀಡಿದರು.

**<><*<><>*><>**

ಉತ್ತರ ಪ್ರದೇಶ ಸರ್ಕಾರದ ವಿಶೇಷ ಸಚಿವ ಸಂಪುಟ ಸಭೆ ಇಂದು ಪ್ರಯಾಗ್‌ರಾಜ್‌ನಲ್ಲಿ ನಡೆಯಲಿದೆ. ಉತ್ತರ ಪ್ರದೇಶ ಸರ್ಕಾರದ ಎಲ್ಲಾ ೫೪ ಸಚಿವರನ್ನು ಈ ಸಭೆಯಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಈ ಸಭೆಯನ್ನು ಮೊದಲು ಮೇಳ ಪ್ರಾಧಿಕಾರದ ಸಭಾಂಗಣದಲ್ಲಿ ನಡೆಸಲು ಯೋಜಿಸಲಾಗಿತ್ತು, ಆದರೆ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲು ಮಹಾಕುಂಭಕ್ಕೆ ಭೇಟಿ ನೀಡುವ ಭಕ್ತರು ಮತ್ತು ಯಾತ್ರಾರ್ಥಿಗಳಿಗೆ ಅನಾನುಕೂಲತೆಯನ್ನು ತಪ್ಪಿಸಲು ಸ್ಥಳವನ್ನು ಬದಲಾಯಿಸಲಾಗಿದೆ ಎಂದು ನಮ್ಮ ವರದಿಗಾರರು ವರದಿ ಮಾಡಿದ್ದಾರೆ.

**<><*<><>*><>**

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಮೌನಿ ಅಮವಾಸ್ಯ ದಿನದಂದು ಸುಮಾರು ೮ ರಿಂದ ೧೦ ಕೋಟಿ ಭಕ್ತರು ಪವಿತ್ರ ಸ್ನಾನ ಮಾಡುವ ನಿರೀಕ್ಷೆಯಿದೆ ಎಂದು ಸರ್ಕಾರ ಅಂದಾಜಿಸಿದೆ. ಆಕಾಶವಾಣಿ ಸುದ್ದಿವಿಭಾಗದೊಂದಿಗೆ ಮಾತನಾಡಿದ ಉತ್ತರ ಮಧ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಶಶಿಕಾಂತ್ ತ್ರಿಪಾಠಿ, ಮೌನಿ ಅಮವಾಸ್ಯ ದಿನದಂದು ಜನರ ದಟ್ಟಣೆ ಹೆಚ್ಚಲಿದ್ದು, ಇದಕ್ಕಾಗಿ ೪೦೦ ವಿಶೇಷ ರೈಲುಗಳನ್ನು ಓಡಿಸಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು. ನಿಗದಿತ ರೈಲ್ವೆ ನಿಲ್ದಾಣಗಳಿಂದಲೇ ಪ್ರಯಾಣವನ್ನು ಆರಂಭಿಸುವಂತೆ ಅವರು ಭಕ್ತಾದಿಗಳಿಗೆ ಮನವಿ ಮಾಡಿದ್ದಾರೆ.

ಧ್ವನಿ: ಶಶಿಕಾಂತ್ ತ್ರಿಪಾಠಿ

<><*<><>*><>

ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ, ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಹಲವಾರು ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದ್ದಾರೆ. ಮೊದಲಿಗೆ ಡೊನಾಲ್ಡ್ ಟ್ರಂಪ್, ಮಾಜಿ ಅಧ್ಯಕ್ಷ ಜೋ ಬೈಡನ್ ಜಾರಿಗೊಳಿಸಿದ್ದ ೭೮ ನೀತಿಗಳನ್ನು ರದ್ದುಗೊಳಿಸುವ ಕಡತಗಳಿಗೆ ಸಹಿ ಹಾಕಿದ್ದಾರೆ. ಇದರ ಜೊತೆಗೆ ಅಧ್ಯಕ್ಷ ಟ್ರಂಪ್ ತಾತ್ಕಾಲಿಕ ಮತ್ತು ಕಾನೂನು ಬಾಹಿರವಾಗಿ ಅಮೆರಿಕಾದಲ್ಲಿ ನೆಲೆಸಿರುವ ಪ್ರವಾಸಿಗರು, ವಿದ್ಯಾರ್ಥಿಗಳು ಮತ್ತು ಕೆಲಸದ ಕಾರಣಗಳಿಂದ ಅಮೆರಿಕಾದಲ್ಲಿರುವ ಜನರ ಮಕ್ಕಳಿಗೆ ಜನ್ಮಸಿದ್ಧ ಪೌರತ್ವ ನೀಡಲು ನಿರ್ಬಂಧ ಹೇರುವ ಆದೇಶಕ್ಕೆ ಸಹಿ ಹಾಕಿದ್ದಾರೆ. ಈ ಆದೇಶದ ಅನುಷ್ಠಾನಕ್ಕಾಗಿ ಸಂಸ್ಥೆಗಳಿಗೆ ೩೦ ದಿನಗಳ ಕಾಲಾವಕಾಶ ನೀಡಲಾಗಿದೆ. ಅಮೆರಿಕದಲ್ಲಿ ಜನಿಸಿದ ಮಗು ಪೌರತ್ವ ಪಡೆಯಲು, ಕನಿಷ್ಠ ಒಬ್ಬ ಪೋಷಕರು ಅಮೆರಿಕದ ನಾಗರಿಕರಾಗಿರಬೇಕು, ಗ್ರೀನ್ ಕಾರ್ಡ್ ಹೊಂದಿರುವ ಕಾನೂನುಬದ್ಧ ಶಾಶ್ವತ ನಿವಾಸಿಯಾಗಿರಬೇಕು ಅಥವಾ ಅಮೆರಿಕದ ಮಿಲಿಟರಿ ಸದಸ್ಯರಾಗಿರಬೇಕು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಇದೇ ವೇಳೆ, ವಿಶ್ವ ಆರೋಗ್ಯ ಸಂಸ್ಥೆ-WHO ಯಿಂದ ಹಿಂದೆ ಸರಿಯುವಂತೆ ಅವರು ನಿರ್ದೇಶಿಸಿದ್ದಾರೆ. ಜಾಗತಿಕ ಆರೋಗ್ಯ ಸಂಸ್ಥೆಯು ಕೋವಿಡ್-೧೯ ಸಾಂಕ್ರಾಮಿಕ ರೋಗವನ್ನು ಅಸಮರ್ಪಕವಾಗಿ ನಿರ್ವಹಿಸಿದ್ದು, ತುರ್ತಾಗಿ ಅಗತ್ಯವಿರುವ ಸುಧಾರಣೆಗಳನ್ನು ಅಳವಡಿಸಿಕೊಳ್ಳುವಲ್ಲಿ ವಿಫಲವಾಗಿರುವುದು ಸೇರಿದಂತೆ ಹಿಂದೆ ಸರಿಯುವಿಕೆಗೆ ಟ್ರಂಪ್ ತಮ್ಮ ಆದೇಶದಲ್ಲಿ ಹಲವಾರು ಕಾರಣಗಳನ್ನು ಉಲ್ಲೇಖಿಸಿದ್ದಾರೆ. ಕೋವಿಡ್-೧೯ ವಿಷಯದಲ್ಲಿ WHO ಚೀನಾ ಪರ ಪಕ್ಷಪಾತಿ ಧೋರಣೆ ಹೊಂದಿದೆ ಎಂದು ಟ್ರಂಪ್ ಆರೋಪಿಸಿದ್ದಾರೆ. ಈ ನಿರ್ಧಾರದ ಕುರಿತು ವಿಶ್ವ ಆರೋಗ್ಯ ಸಂಸ್ಥೆ, ವಿಷಾದ ವ್ಯಕ್ತಪಡಿಸಿತು. ಈ ಬಗ್ಗೆ ಮರು ಪರಿಶೀಲಿಸುವಂತೆ ಅಧ್ಯಕ್ಷ ಟ್ರಂಪ್ ಅವರನ್ನು ಕೋರಿದೆ. ಪ್ಯಾರಿಸ್ ಹವಾಮಾನ ಒಪ್ಪಂದದಿಂದ ಹಿಂದೆ ಸರಿಯುವ ಪ್ರಕ್ರಿಯೆಯನ್ನು ಪ್ರಾರಂಭಿಸುವ ಆದೇಶಕ್ಕೂ ಅವರು ಸಹಿ ಹಾಕಿದರು. ಚೀನಾ, ಮೆಕ್ಸಿಕೊ ಮತ್ತು ಕೆನಡಾದೊಂದಿಗಿನ ಸುಂಕಗಳು ಮತ್ತು ವ್ಯಾಪಾರ ಸಂಬಂಧಗಳನ್ನು ಪರಿಶೀಲಿಸುವಂತೆ ಅಧ್ಯಕ್ಷ ಟ್ರಂಪ್ ಸರ್ಕಾರಿ ಸಂಸ್ಥೆಗಳಿಗೆ ನಿರ್ದೇಶನ ನೀಡಿದ್ದು, ಅಮೆರಿಕ-ಮೆಕ್ಸಿಕೊ ಗಡಿಯಲ್ಲಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಿ ಒಳನುಸುಳುವಿಕೆಯನ್ನು ತಡೆಯಲು ಸೇನಾಪಡೆ ನಿಯೋಜನೆಗೆ ಆದೇಶಿಸಿದ್ದಾರೆ.

<><*<><>*><>

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ನಿನ್ನೆ ರಾತ್ರಿ ವಾಷಿಂಗ್ಟನ್ ಡಿಸಿಯಲ್ಲಿರುವ ಅಮೆರಿಕದ ವಿದೇಶಾಂಗ ಇಲಾಖೆಯಲ್ಲಿ ತಮ್ಮ ಕ್ವಾಡ್ ಮೈತ್ರಿಕೂಟದ ಸಹವರ್ತಿಗಳನ್ನು ಭೇಟಿಮಾಡಿದರು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್, ಜಪಾನ್‌ನ ಟಕೇಶಿ ಇವಾಯಾ ಮತ್ತು ಆಸ್ಟ್ರೇಲಿಯಾದ ಪೆನ್ನಿ ವಾಂಗ್ ಅವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಕ್ವಾಡ್ ಭಾರತ, ಆಸ್ಟ್ರೇಲಿಯಾ, ಜಪಾನ್ ಮತ್ತು ಅಮೆರಿಕಾ ನಡುವಿನ ರಾಜತಾಂತ್ರಿಕ ಪಾಲುದಾರಿಕೆಯಾಗಿದ್ದು, ಎಲ್ಲರನ್ನೂ ಒಳಗೊಳ್ಳುವ ಹಾಗೂ ಮುಕ್ತ, ಸ್ಥಿರ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್ ಅನ್ನು ಬೆಂಬಲಿಸಲು ಬದ್ಧವಾಗಿದೆ. ರೂಬಿಯೊ ಅವರು ಅಧಿಕಾರ ವಹಿಸಿಕೊಂಡ ಮೊದಲ ದಿನದಂದು ಕ್ವಾಡ್ ವಿದೇಶಾಂಗ ಸಚಿವರನ್ನು ಭೇಟಿ ಮಾಡುವ ಮೂಲಕ ಅಮೆರಿಕಾ ವಿದೇಶಾಂಗ ಕಾರ್ಯದರ್ಶಿಯಾಗಿ ಕೆಲಸವನ್ನು ಪ್ರಾರಂಭಿಸಿದರು. ಅಧ್ಯಕ್ಷ ಡೊನಾಲ್ಡ್

ಟ್ರಂಪ್ ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಲು ಕ್ವಾಡ್ ವಿದೇಶಾಂಗ ಸಚಿವರು ವಾಷಿಂಗ್ಟನ್‌ನಲ್ಲಿದ್ದಾರೆ. ಇದಕ್ಕೂ ಮುನ್ನ ನಿನ್ನೆ ಬೆಳಗ್ಗೆ ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ಮಾರ್ಕೊ ರೂಬಿಯೊ ಅವರನ್ನು ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಿಸಿದರು.

<><*<><>*><>

ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಇಂದು ಭಾರತ ತಂಡವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್-ಗವಾಸ್ಕರ್ ಟ್ರೋಫಿ ಸರಣಿಯ ಸೋಲಿನ ನಂತರ, ಭಾರತ ತಂಡವು ಈ ಸರಣಿಯನ್ನು ಗೆಲ್ಲುವ ಹುಮ್ಮಸಿನಲ್ಲಿದೆ. ಮುಂದಿನ ತಿಂಗಳು ಪ್ರಾರಂಭವಾಗಲಿರುವ ಚಾಂಪಿಯನ್ಸ್ ಟ್ರೋಫಿಗೆ ಮುಂಚಿತವಾಗಿ ಸೂರ್ಯಕುಮಾರ್ ಯಾದವ್ ನೇತೃತ್ವದ ತಂಡ, ವೇಗದ ಬೌಲರ್ ಮೊಹಮ್ಮದ್ ಶಮಿ ಮರಳುವಿಕೆಯಿಂದ ಬಲಗೊಳ್ಳಲಿದೆ. ಮತ್ತೊಂದೆಡೆ, ವೇಗಿ ಮಾರ್ಕ್ ವುಡ್ ಕಳೆದ ವರ್ಷ ಆಗಸ್ಟ್ ನಂತರ ಮೊದಲ ಬಾರಿಗೆ ತಂಡಕ್ಕೆ ಮರಳಲಿದ್ದಾರೆ. ಸರಣಿಯು ಕೋಲ್ಕತ್ತಾದಲ್ಲಿ ಪ್ರಾರಂಭವಾಗಿ ನಂತರ ಚೆನ್ನೈ, ರಾಜ್‌ಕೋಟ್, ಪುಣೆ ಮತ್ತು ಕೊನೆಯ ಟಿ-೨೦ ಪಂದ್ಯ ಫೆಬ್ರುವರಿ ೨ ರಂದು ಮುಂಬೈನಲ್ಲಿ ನಡೆಯಲಿದೆ. ಟಿ-೨೦ ಎಲ್ ಸರಣಿಯ ನಂತರ, ತಂಡಗಳು ಫೆಬ್ರುವರಿ ೬ ರಿಂದ ಪ್ರಾರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿ ಆಡಲಿವೆ.

<><*<><>*><>

ಇಂಡೋನೇಷ್ಯಾ ಮಾಸ್ಟರ್ಸ್ ಸೂಪರ್- ೫೦೦ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ಶಟ್ಲರ್ ಪಿವಿ ಸಿಂಧು, ಇಂದು ಜಕಾರ್ತದಲ್ಲಿ ನಡೆಯಲಿರುವ ಮಹಿಳಾ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ವಿಯೆಟ್ನಾಂನ ಟಿ.ಎಲ್. ನ್ಗುಯೆನ್ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ಸಂಜೆ ೪:೪೦ ಕ್ಕೆ ಪ್ರಾರಂಭವಾಗಲಿದೆ. ಪುರುಷರ ಸಿಂಗಲ್ಸ್‌ನಲ್ಲಿ, ಕಿರಣ್ ಜಾರ್ಜ್ ಆರಂಭಿಕ ಸುತ್ತಿನಲ್ಲಿ ಕೊರಿಯಾದ ಜಿಯೋನ್ ಹ್ಯೋಕ್-ಜಿನ್ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಇಂದು ಬೆಳಿಗ್ಗೆ ೧೦:೪೦ ಕ್ಕೆ ಪ್ರಾರಂಭವಾಗಲಿದೆ. ಮತ್ತೊಂದೆಡೆ, ಲಕ್ಷ್ಯ ಸೇನ್ ೩೨ ನೇ ಸುತ್ತಿನ ಸ್ಪರ್ಧೆಯಲ್ಲಿ ಜಪಾನ್‌ನ ಟಕುಮಾ ಒಬಯಾಶಿ ಅವರನ್ನು ಎದುರಿಸಲಿದ್ದಾರೆ. ಪಂದ್ಯ ಸಂಜೆ ೭:೧೦ ಕ್ಕೆ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**